ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಶಂಬೂರು, ಬರಿಮಾರು, ಕಡೇಶ್ಯಾಲ್ಯ, ಕೋಡಪದವು, ಸಾಲೆತ್ತೂರು ಇತ್ಯಾದಿ ಪ್ರದೇಶಗಳಿಗೆ ಬಸ್ಸು ಸರ್ವೀಸು ಹೆಚ್ಚಿಸುವ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಬಸ್ಸು ಸರ್ವೀಸುಗಳನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ಹಾಲಿ ಕ.ರಾ.ರ.ಸಾ. ಸಂಸ್ಥೆಯು ಮಂಗಳೂರಿನಿಂದ ಪ್ರತಿದಿನ ರಾಷ್ಟ್ರೀಕೃತವಾದ ಪ್ರದೇಶದಲ್ಲಿರುವ ಬರಿಮಾರುಗೆ ನಾಲ್ಕು ಏಕಮುಖ ಸುತ್ತುವಳಿಗಳು, ಕೋಡಪದವುಗೆ ನಾಲ್ಕು ಏಕಮುಖ ಸುತ್ತುವಳಿಗಳು, ಕಡೇ ಶಿವಾಲಯಕ್ಕೆ 12 ಏಕಮುಖ ಸುತ್ತುವಳಿಗಳು ಹಾಗೂ ಸಾಲೆತ್ತೂರಿಗೆ 17 ಏಕಮುಖ ಸುತ್ತುವಳಿಗಳು ಹಾಗೂ ರಾಷ್ಟ್ರೀಕೃತವಾಗದಿರುವ ಪ್ರದೇಶದಲ್ಲಿರುವ ಶಂಭೂರಿಗೆ 8 (ಎಂಟು) ಏಕಮುಖ ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು ಹಾಲಿ ಈ ಸಾರಿಗೆಗಳು ಪ್ರಯಾಣಿಕರ ಅವಶ್ಯಕತೆಗಳನ್ನು ಸಮರ್ಪಕವಾಗಿ ಪೂರೈಸುತ್ತಿವೆ. ಆದಾಗ್ಯೂ ರಾಷ್ಟ್ರೀಕೃತ ಪ್ರದೇಶದಲ್ಲಿರುವ ಸ್ಥಳಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.

ವಿಷಯ: ರಾಜ್ಯದಲ್ಲಿ ಕೃಷಿ ವಿಜ್ಞಾನ ಕಾಲೇಜುಗಳ ಕುರಿತು.

2678 (3262)

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೃಷಿ ವಿಜ್ಞಾನ ಕಾಲೇಜುಗಳಿವೆ?

ಆ) ರಾಜ್ಯದಲಿ ಪ್ರತಿ ಜಿಲ್ಲೆಗೊಂದು ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕ್ರಮ ತೆಗೆದುಕೊಂಡಿರುವ: ಉದ್ದೇಶಿಸಿರುವ ಕ್ರಮವೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 19 ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕಾಲೇಜುಗಳಿದ್ದು, ಇದರಲ್ಲಿ 11 ಮತ್ತು 6 ಕಾಲೇಜುಗಳು ಕ್ರಮವಾಗಿ ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೊಳಪಟ್ಟಿದೆ.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ವಿಷಯ: ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ಕಾರ್ಯವಿಳಂಬ.

2680 (3982)

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಅಕ್ರಮ : ಒತ್ತುವರಿ ಭೂಮಿ ಸಕ್ರಮಗೊಳಿಸಲು ಬಂದಿದ್ದ ಅರ್ಜಿಗಳಲ್ಲಿ (ಕಾನೂನು ರೀತಿ) ವಿತರಣೆಯಾಗದೆ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಉಳಿದಿರಲು ಕಾರಣವೇನು?

ಆ) ಅರ್ಜಿಗಳನ್ನು ಸಲ್ಲಿಸದೇ ಅಥವಾ ನಂತರ ಒತ್ತುವರಿಯಾಗಿರುವ ಭೂಮಿಯ ಸಕ್ರಮಕ್ಕೆ ಸರ್ಕಾರ ಅವಕಾಶ ಕಲ್ಪಿಸುತ್ತಿದೆಯೇ; ಹಾಗಿದ್ದಲ್ಲಿ ಯಾವಾಗ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಸಕ್ರಮ ಸಮಿತಿಗಳ ಮುಂದೆ ಬಾಕಿ ಇರುವ ಅರ್ಜಿಗಳ ಒಟ್ಟು ಸಂಖ್ಯೆ: 3,15,353.

ಆ) ಸರ್ಕಾರದ ಪರಿಶೀಲಿನೆಯಲ್ಲಿರುತ್ತದೆ.

ವಿಷಯ: ಬಗರ್ ಹುಕುಂ ಸಾಗುವಳಿದಾರರಿಗೆ ಸಕ್ರಮ.

2684 (4047)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಬಗರ್ ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು? ಎಷ್ಟು ಸಾಗುವಳಿದಾರರಿಗೆ ಭೂಮಿಯನ್ನು ಸಕ್ರಮಗೊಳಿಸಲಾಗಿದೆ?